ಬಿ. ಬಿ. ಎಂ. ಪಿ. ಮುಖ್ಯ ಆಯುಕ್ತರವರ ಆಪ್ತ ಕಾರ್ಯಾಲಯ
ಸ್ವೀಕೃತಿ ಪಿ. ಎಸ್. ಆರ್. (1) 1096
ದಿನಾಂಕ 11/5/2022

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿಬಿಎಂಪಿ ವ್ಯಾಪ್ತಿಯ ಬಿ.ಟಿ.ಎಂ ಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ನಿಗಧಿಪಡಿಸಿರುವ ರೂ.80.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**
1. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾಡಿರುವ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022.
3. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (1).
4. ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಮುಆ/ಪಿಆರ್/ಜಿ-174/2021-22, ದಿನಾಂಕ: 11-04-2022.

EE (BTM) 2315
ಮುಖ್ಯ ಅಭಿಯಂತರರು (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Office of the Zonal Commissioner (South)
Bruhath Bengaluru Mahanagara Palike
No. 150/2022-23
Date: 18/5/2022

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ ಬಿಬಿಎಂಪಿ ಮೂಲಕ ಮುಖ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 14-01-2022ರ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.6000.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ: (3) ರಲ್ಲಿ ಓದಲಾದ ದಿನಾಂಕ: 25-02-2022 (1) ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022 ರಂತೆ ಅನುಮೋದಿಸಲಾಗಿರುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸಂಬಂಧಿಸಿದಂತೆ ಬಿ.ಟಿ.ಎಂ ಲೇಔಟ್ ವಿಧಾನ ಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿ ಆದೇಶಿಸಲಾಗಿರುತ್ತದೆ.

ZC South 16.5.22
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

CE 20/5/22
Zonal Commissioner (South)
Bruhath Bengaluru Mahanagara Palike

ಮುಖ್ಯ ಅಭಿಯಂತರರು (ದಕ್ಷಿಣ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನಂ. 346
ದಿನಾಂಕ 23/5/22
ಬೆಂಗಳೂರು

...2/...

Scanned with CamScanner

ಮೇಲೆ ಕ್ರಮ ಸಂಖ್ಯೆ: (4) ರಲ್ಲಿ ಓದಲಾದ ದಿನಾಂಕ: 11-04-2022 ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್ ವೈ 2021, ದಿನಾಂಕ: 25.02.2022 (1) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ" ಯಡಿಯಲ್ಲಿ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನ ನಿಗಧಿಪಡಿಸಿ, ಮಾನ್ಯ ಶಾಸಕರ ಕೋರಿಕೆಗಳನ್ನು ಪರಿಗಣಿಸಿ, ಸದರಿ ಅನುಮೋದಿತ ಅನುದಾನಕ್ಕೆ ಅನುಗುಣವಾಗಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ 15 ದಿನಗಳೊಳಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಅದರಂತೆ, ಮಾನ್ಯ ಶಾಸಕರು, ಬಿಟಿಎಂ ವಿಧಾನಸಭಾ ಕ್ಷೇತ್ರ ರವರೊಂದಿಗೆ ವಲಯ ಮುಖ್ಯ ಅಭಿಯಂತರರು (ದಕ್ಷಿಣ) ರವರು ಸಭೆ ನಡೆಸಿ, ಚರ್ಚಿಸಿದ್ದು, ದಿನಾಂಕ: 24-03-2022ರಲ್ಲಿ ಮಾನ್ಯ ಶಾಸಕರು 8 ಕಾಮಗಾರಿಗಳಿಗೆ ರೂ.80.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಕೋರಿರುವಂತೆ ಸದರಿ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಕೋರಿರುತ್ತಾರೆ.

ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 208 ಎಂಎನ್‌ವೈ 2022 (ಇ),</u>**
**<u>ಬೆಂಗಳೂರು, ದಿನಾಂಕ: 07-05-2022.</u>**

ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (1) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಬಿ.ಟಿ.ಎಂ. ವಿಧಾನ ಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿ ಆದೇಶಿಸಿದ್ದು, ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯಂತೆ, ಸದರಿ ರೂ.80.00 ಕೋಟಿಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

**BRUHAT BANGALURU MAHANAGARA PALIKE**

**List of Works Praposed Under Chief Minister's Amrutha Nagrothana Yojane for the year 2021-22 in BTM Layout Division**

| Sl No | Ward No | Name of the Work | Estimated Cost (In Lakhs) |
|---|---|---|---|
| 1 | 146 | Improvements to drains and Asphalting to Balanced roads in Lakkasandra Ward No 146 | 99.00 |
| 2 | 146 | Over All Development works in Nanjappa Layout and Surrounding Area in Lakkasandra Ward No 146 | 49.00 |

...3/-

| | | | |
|---|---|---|---|
| 3 | 147 | Construction of Additional Floor to Samudhaya Bhavana beside Karumariyamma temple 7th main road, Rajendra Nagar in ward No.147 Adugodi | 99.00 |
| 4 | 147 | Providing RCC Drain at 2nd Main & 2nd A Main road & surrounding area in 8th block Koramangala ward no.147 Adugodi | 99.00 |
| 5 | 147 | Construction RCC box drains to 1st main road from 20th main to CAR Police quatress (dead end) in 7th Block and other development works to surrounding area in Adugodi ward no.147 | 99.00 |
| 6 | 147 | Asphalting to bad roads & Improvements to drains in 7th block Koramangala in ward No.147 Adugodi | 50.00 |
| 7 | 147 | Developmental works to Kempegowda Samudhaya Bhavana in ward No.147 Adugodi | 93.00 |
| 8 | 147 | Construction of Auditorium and Other development works to Govt. School at CAR Quarters premises in Adugodi ward No.147 | 99.00 |
| 9 | 148 | Providing Cobble stone pavers and Asphalting to the damaged roads in 17th Cross, 16th Cross, 15th Cross road, 14th Cross, 13th Cross, 12th Cross, 11th Cross and 10th Cross roads and surrounding Muniswamy gowda road in Ejipura ward No.148 Ejipura | 99.00 |
| 10 | 148 | Improvments to drains and cross roads of Ashwini layout low lying areas in ward No.148 Ejipura | 99.00 |
| 11 | 148 | Improvments to 4th 'A' & 'B' cross, 3rd cross Yellamma Temple and VGS Temple surrounding cross roads of 27th main road in ward No.148 Ejipura | 98.00 |
| 12 | 148 | Providing Cobble stone pavers and Asphalting cross roads to 13th cross, 7th 'A cross, 1st Cross and 4th cross roads of R.A road Ejipura ward No.148 | 60.00 |
| 13 | 148 | Improvements to ST Bed 1st main road from Magnum Health care up to Seva in action and Connected cross road drains in Ejipura ward No.148 | 99.00 |
| 14 | 148 | Restoration of UGD cutting in Indira Gandhi Colony roads and Connected roads with New Cobble Stone Pavers in Ejipura ward No.148 | 99.00 |
| 15 | 148 | Improvements to RA Road 19th A cross, JJ Church road, 4th B Cross, 1st Cross, 2nd Cross RA Road, Sadappa house road, Rangappa Garden, Nadugada road in Ejipura ward no.148 | 99.00 |
| 16 | 148 | Improvments to drains, Culverts and roads in MM Garden and surrounding area in ward No.148 Ejipura | 80.00 |

. . .4/-

Scanned with CamScanner

| | | | |
|---|---|---|---|
| 17 | 148 | Restoration of UGD/ Water line cut portion in Srinivagilu Ayyappa Swamy Temple back side and Varamuneshwara Temple cross roads and Govt. School road in Ejipura ward No.148 | 80.00 |
| 18 | 148 | Improvements to Drains and Providing and fixing of sluice gates / NRV / Gate valves/ Retaining walls to the drains dirctly connecting to SWD's to avoid back watering in NGV & Ejipura ward No.148 | 57.00 |
| 19 | 148 | Construction and Providing additional floor and furnishing works to Samudaya Bhavana in Mahathama Gandhi Colony in ward No.148 Ejipura | 90.00 |
| 20 | 148 | Improvements to lead off drains to connecting to SWD near Stanley house and Ex- corporator Ramachandra house in ward No.148 Ejipura | 90.00 |
| 21 | 151 | Cosntruction of RCC Box drain and other development works to 6th Cross road from 100 feet road to 17th E main road in 6th Block Koramangala and Surrounding area in ward No.151 Koramangala | 99.00 |
| 22 | 151 | Cosntruction of RCC Box drain and other development works to 17th B, 17th C and 17th E main road in 6th Block Koramangala and Surrounding area in ward No.151 | 99.00 |
| 23 | 151 | Construction of Compound wall, Partition wall and Elevation work to Multipurpose Building at Mestripalya in ward No151 Koramangala | 80.00 |
| 24 | 151 | Providing and fixing partition wall and supplying of furinture and other developmental works to Sub Division office and revenue office in ward No.151 Koramangala | 99.00 |
| 25 | 151 | Construction and Improvements to drains and Other development works in 5th Block Koramangala ward No.151 | 128.00 |
| 26 | 151 | Construction of Cobble stone paver, Asphalt to roads in Koramangala Village in ward No.151 Koramangala | 99.00 |
| 27 | 151 | Construction of Samudhaya Bhavana in Jakkasandra 1st block ward No.151 Koramangala | 99.00 |
| 28 | 151 | Asphalting to Roads and Improvements to Foot paths in 3rd Block and surrounding area in Koramangala ward No.151 | 200.00 |
| 29 | 151 | Construction of RCC Box drain in Mestripalya and surrounding area in Koramangala ward No.151 | 58.00 |
| 30 | 152 | Improvement work to Path way From Chikkadugodi to St.johns Quarters and Other improvements work in ward No 152 S G Palya | 99.00 |
| 31 | 152 | Comprehensive Development of Works to Roads, Drains, Footpaths in Balajainagara, Bhavaninagara, Kaveri Layout, Venkateshwara Layout, Brindavanana Nagara, Jogi colony and Surroundings area ward No 152 S G Palya | 99.00 |

. . .5/-

Scanned with CamScanner

| | | | |
|---|---|---|---|
| 32 | 152 | Improvements to Drain ,Footpath and roads in Maruthinagara, Old Post office road and Surroundings area in ward no 152 S G palya | 99.00 |
| 33 | 152 | Improvements to roads, drains and Footpath in cross roads opposite to Bannerughatta road and Surroundings area in ward no 152 S G Palya | 99.00 |
| 34 | 152 | Construction of Additional Floor for Hospital Building and Providing Furniture and interior Works in Madiwala, Maruthingara in ward no 152 S G Palya | 107.00 |
| 35 | 152 | Improvement works to Asphalting road and Providing Cobble stone from 1st cross to 12th cross road Bharathi layout and Surroundings area in ward no 152 S G Palya | 99.00 |
| 36 | 172 | Construction of New Anganawadi Building at old Madiwala Near Someshwara Temple in ward No 172 Madiwala | 127.00 |
| 37 | 172 | Improvements Drains footpath and Roads to Bank Officers colony and Surroundiung area in ward No 172 Madiwala | 99.00 |
| 38 | 172 | Improvements to roads at Madduramma colony and Surrounding area in ward No 172 Madiwala | 99.00 |
| 39 | 172 | Improvements to roads and Desilting of drains to Venkateshwara Layout in ward No 172 Madiwala | 99.00 |
| 40 | 172 | Improvements to roads Drains and footpaths at Coconut Garden and chennamma Layout & Surrounding ares in ward No 172 Madiwala | 99.00 |
| 41 | 172 | Improvements to roads Drains and footpaths at Chashier Layout Tavarekere village & Narayangowda Layout Surrounding ares in ward No 172 Madiwala | 99.00 |
| 42 | 172 | Improvements to roads Drains and footpaths at Dollars scheme colony and Surrounding ares in ward No 172 Madiwala | 99.00 |
| 43 | 172 | Improvements to roads Drains and footpaths at 14th cross Venkateshwara Layout and Surrounding areas in ward No 172 Madiwala | 99.00 |
| 44 | 172 | Comprehensive Development and Over all Improvements to Roads drains and Footpaths At Old Madiwala and Surroundings Area in ward No 172 Madiwala | 99.00 |
| 45 | 173 | Improvements to roads near Yellamma Temple and surrounding cross roads in 3rd Main road in ward No.173 Jakkasandra | 99.00 |
| 46 | 173 | Improvements to roads and drains in HSR 6th Sector behind Metro station in ward No.173 Jakkasandra | 72.00 |
| 47 | 173 | Improvements to roads and Drains in teachers Colony 1st Main, 2nd Main and bad reaches in Jakksasandra ward No.173 | 75.00 |

. . .6/-

Scanned with CamScanner

| | | | |
|---|---|---|---|
| 48 | 173 | Providing and fixing of Grills to Compound and Entrance Arch and other Developmental works to the BBMP Play Ground in Teachers Colony in ward No.173 Jakkasandra | 70.00 |
| 49 | 173 | Improvements of Damaged Culvert and Drains, Rain water Harvesting pits in ward No.173 Jakkasandra | 54.00 |
| 50 | 173 | Providing Asphalting and Cobble stone pavers to Jakkasandra 1st main surrounding, Electrical Srinivas house and back side cross roads in ward No.173 Jakkasandra | 80.00 |
| 51 | 176 | Asphalting to EWS Colony from 7th crs to 20th crs in ward No 176 BTM Layout | 99.00 |
| 52 | 176 | Asphalting to Sanjeevamma Badavane & Balanced roads of Mahadeshwara Nagara and Surrounding area in ward No 176 BTM layout | 99.00 |
| 53 | 176 | Asphalting to 3rd A to E cross Roopenanagara in ward No 176 BTM Layout | 99.00 |
| 54 | 176 | Asphalting to 15th, 14th, 13th, 12th, 11th and 10th Main and cross roads in Sunshine colony in ward No 176 BTM layout | 99.00 |
| 55 | 176 | Asphalting to 8th to 13th cross, 6th Main MICO Layout and Surroundings area in ward No 176 BTM Layout | 99.00 |
| 56 | 176 | Asphalting to 2nd to 5th Main road SFHS Layout in ward no 176 BTM layout | 99.00 |
| 57 | 176 | Asphalting to roads around Kuvempu Park & Kempegowd Play Ground in ward No 176 BTM Layout | 75.00 |
| 58 | 176 | Asphalting to 2nd cross to 11th cross and Lake road surroundings area in ward No 176 BTM Layout | 99.00 |
| 59 | 176 | Desilting and Improvements to drain in Roopenanagara and Surroundings area in ward No 176 BTM Layout | 75.00 |
| 60 | 176 | Desilting and Improvements to drain in Nanjappa Layout and KAS colony in ward No 176 BTM Layout | 92.00 |
| 61 | 176 | Desilting and Improvements to drain in Pushpa Layout and MICO Layout in ward No 176 BTM Layout | 99.00 |
| 62 | 176 | Desilting and Improvements to drains from 12th cross to 21st cross 7th Main N S Palya in ward No 176 BTM Layout | 99.00 |
| 63 | 176 | Desilting and Improvements to drains from 4th cross to13th cross Lake road in ward No 176 BTM Layout | 99.00 |
| 64 | 176 | Improvement to Roads, footpaths and Drains works at Mahadeshwara nagara, Sunshine Colony HSBCS Layout, Madeena Nagara and Surrounding areas in ward No 176 BTM Layout | 99.00 |

..7/-

Scanned with CamScanner

| Project South Zone BBMP | | | |
|---|---|---|---|
| 65 | 151 | Development of Parks at 2nd A cross road, 2nd cross Park and surrounding area at 5th block, Koramanagala in Ward 151 | 80.00 |
| 66 | 151 | Development of 17th G main road, 18th Main park by providing property protection works, Pathway repairs works and other improvements to surrounding area at 6th block, Koramanagala in Ward 151 | 95.00 |
| 67 | 151 | Providing additional children Play equipments and Gym equipments and also to provide shelter to Gym area and other developmental works at Veera Yodhara Vana Park, 3rd Block, Kormangala and surrounding area in ward No.151 | 98.80 |
| 68 | 151 | Balance developments works at triangle park, rectangular Park at 4th block Koramangala and surrounding area of BTM Layout Assembly Constituency in ward No.151 | 89.00 |
| 69 | 147 | Development of Parks at Kadamba park and Parade Ground at Adugodi police quarters and surrounding area of BTM Layout Assembly Constituency in ward No.147 | 95.00 |
| 70 | 147 | Development of Pathway, Providing Chairs and shelters for seating position and property protection works at Chamundeshwari Park and surrounding area in ward no.147 Adugodi | 98.00 |
| 71 | 151 | Providing property protection work by providing Ornamental Grill and other developmental works at Wipro park near 6th main road,1st block, Koramanagala in Ward 151 | 90.00 |
| 72 | 173 | Development of 1st avenue Park and surrounding area in Ward No.173 Jakkasandra | 98.00 |
| 73 | 173 | Development of Parks 6th avenue, 2nd Main road park, KSRP Quarters park and surrounding area in Ward No.173 Jakkasandra | 99.00 |
| 74 | 172 | Providing Pathway, Children equipments and providing additional balance works to Sports building at 16th Main Road Park adjacent to BTM layout Subdivision in ward No.172 | 98.00 |
| 75 | 152 | Additional improvements to Multipurpose Building and Construction of Kitchen and other Utilities at Tank Bund Road next to Indira Canteen and surrounding area in ward No.152 | 145.00 |
| 76 | | Providing Granite benches and other repairs to damaged property protection works in BTM Layout Assembly Constituency | 77.70 |
| 77 | 176 | Improvements to Park by providing property protection works, Additional development to Multipurpose building at Kuvempu Park and surrounding area in Ward No.176 | 140.00 |

. . .8/-

Scanned with CamScanner

| | | | |
|---|---|---|---|
| 78 | 148 | Improvemts to Centre Median at NGV Main Road from 80 feet Road upto Tungabhadra Block and development of Open spaces NGV Premises and surrounding area in Ward No.148 | 196.50 |
| | | **Electrical South Zone BBMP** | |
| 79 | 148 & 151 | Providing Street Lighting with accessories and Illumination to Major Roads from Ravi Tent To Wipro Park junction via passport Office, replacement of deterioted street light fittings, installation of tubular poles in dark stretches coming under Ejipura ward 148 and koramangala ward 151 | 175.00 |
| 80 | 151 & 173 | Providing Street Lighting and park lightings with accessories and Illumination to Major Roads, replacement of deterioted street light fittings, installation of conical poles in dark stretches from BDA Complex Koramangala to Raheja Residency and 14 th Main HSR 5th sector coming under Jakkasandra ward 173 | 115.00 |
| 81 | 146, 147 & 152 | Providing Street Lighting, park lightings, Play Grounds with accessories and Illumination to Major Roads, replacement of deterioted street light fittings, installation of new poles in dark stretches coming under Ward-146 Lakkasandra, ward-147 Adugodi and ward-152 Suddaguntepalya | 100.00 |
| 82 | 172 & 176 | Providing Street Lighting and park lightings with accessories and Illumination to Major Roads, replacement of deterioted street light fittings, installation of poles in dark stretches coming under ward 172 and Ward 176. | 110.00 |
| | | **TOTAL** | **8000.00** |

**<u>ಷರತ್ತುಗಳು:</u>**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಂ. ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಮತ್ತು ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.80.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಅನುವು ಮಾಡಿರುವ ರೂ.80.00 ಕೋಟಿಗಳಿಗೆ ಮೀರಿದ ಯಾವುದೇ ವೆಚ್ಚ ಮತ್ತು ಟೆಂಡರ್ ಪ್ರೀಮಿಯಂಗಾಗಿ ಮಾಡುವ ವೆಚ್ಚವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಟೆಂಡರ್ ಪ್ರೀಮಿಯಂ ಮೊತ್ತವನ್ನು ಅಂದಾಜಿನಲ್ಲಿ ಅನುವು ಮಾಡತಕ್ಕದ್ದಲ್ಲ.

2. ಸದರಿ ಕಾಮಗಾರಿಗಳನ್ನು ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್ ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement ಮುಖಾಂತರ ಕೈಗೊಂಡು, ಟೆಂಡರ್

..9/-

Scanned with CamScanner

ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್.ಎಫ್.ಸಿ 2016, ಬೆಂಗಳೂರು, ದಿನಾಂಕ: 14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುವುದು. ಯಾವುದೇ ಕಾಮಗಾರಿಗಳನ್ನು ವಿಭಜಿಸತಕ್ಕದ್ದಲ್ಲ.

3. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ / ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಪೂರ್ವಾನ್ವಯವಾಗಿ ಖಚಿತಪಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.

4. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಮುಖ್ಯ ಆಯುಕ್ತರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಬಿಬಿಎಂಪಿಯ ಮುಖ್ಯ ಆಯುಕ್ತರು ತಮ್ಮ ಹಂತದಲ್ಲಿ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳಾಗಿ ವಿಂಗಡಿಸಿ ಆದೇಶ ಹೊರಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

5. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿಬಿಎಂಪಿಯ ಪ್ರಧಾನ ಅಭಿಯಂತರರು ಹಾಗೂ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮ ವಹಿಸತಕ್ಕದ್ದು.

6. ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

7. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.

8. ಸರ್ಕಾರವು ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಬದಲಾವಣೆ ಮಾಡ ತಕ್ಕದ್ದಲ್ಲ. ಯಾವುದಾದರೂ ಅನುಮೋದಿತ ಕಾಮಗಾರಿಯ ಅಗತ್ಯವಿಲ್ಲವೆಂದು ಆ ನಂತರದಲ್ಲಿ ತಿಳಿದುಬಂದಲ್ಲಿ ಸಂಬಂಧಪಟ್ಟ ಅಂದಾಜು ಮೊತ್ತವನ್ನು ಉಳಿತಾಯವೆಂದು ಪರಿಗಣಿಸತಕ್ಕದ್ದು.

...10/-

Scanned with CamScanner

9. ಕರ್ನಾಟಕ ಆರ್ಥಿಕ ಸಂಹಿತೆ-1958, ಸಾಧಿಲ್ವಾರು ವೆಚ್ಚ, ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
6. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned with CamScanner